# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1329 |
| ಸದಸ್ಯರ ಹೆಸರು | : ಶ್ರೀ ಸೂರಜ್ ರೇವಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 19.03.2025 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಬರುವ ಸರ್ಕಾರಿ ಭೂಮಿಗಳಾದ ಜಾತ್ರೆ ನಡೆಯುವ ಸ್ಥಳ, ಗ್ರಾಮಕ್ಕೆ ಸೇರಿದ ಸ್ಥಳ, ಗೋಮಾಳಗಳು. ಕೆರೆಗಳು ಹೊಂದಿರುವ ವಿಸ್ತೀರ್ಣ ಹಾಗೂ ಇತರೆ ಸರ್ಕಾರಿ ಭೂಮಿಗಳ ಒಟ್ಟು ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು, ವಿಭಾಗವಾರು ಸಂಪೂರ್ಣ ವಿವರ ನೀಡುವುದು) | ಹಾಸನ ಜಿಲ್ಲೆಯಲ್ಲಿ ಒಟ್ಟು 142009-02 ಎಕರೆ/ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನು ಇರುತ್ತದೆ. ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| (ಆ) | ಹಾಗಿದ್ದಲ್ಲ. ಕಳೆದ 5 ವರ್ಷಗಳಲ್ಲಿ ಮೇಲ್ಕಂಡ ಈ ಎಲ್ಲಾ ಸರ್ಕಾರಿ ಭೂ ಪ್ರದೇಶಗಳಲ್ಲಿ ಸಾರ್ವಜನಿಕರಿಂದ/ಪ್ರಭಾವಿ ಮುಖಂಡರುಗಳಿಂದ ಒತ್ತುವರಿ ಮಾಡಿಕೊಂಡಿರುವ ಭೂ ಪ್ರದೇಶದ ವಿಸ್ತೀರ್ಣ ಎಷ್ಟು; ಈ ಬಗ್ಗೆ ಘನ ನ್ಯಾಯಾಲಯದಲ್ಲಿ ಲೋಕಾಯುಕ್ತ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಸಾರ್ವಜನಿಕರಿಂದ ಒತ್ತುವರಿ ತೆರವುಗೊಳಿಸಲು ಮನವಿ ಸ್ವೀಕರಿಸಲಾಗಿದೆಯೇ; (ತಾಲ್ಲೂಕುವಾರು. ಪ್ರಕರಣವಾರು ಮನವಿಗಳು ಸ್ವೀಕರಿಸಿದ ಸಂಪೂರ್ಣ ವಿವರ ನೀಡುವುದು) | ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 74737-07 ಎಕರೆ/ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನು ಒತ್ತುವರಿಯಾಗಿರುತ್ತದೆ. ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಒತ್ತುವರಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಒಟ್ಟು 90 ಪ್ರಕರಣಗಳು ದಾಖಲಾಗಿರುತ್ತವೆ.<br><br>ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವ ಸಂಬಂಧ ಸಾರ್ವಜನಿಕರಿಂದ ಒಟ್ಟು 382 ಅರ್ಜಿಗಳು ಸ್ವೀಕೃತವಾಗಿದ್ದು, ನಿಯಮಾನುಸಾರ ಕ್ರಮವಹಿಸಲಾಗಿರುತ್ತದೆ. |
| (ಇ) | ಹಾಸನ ಜಿಲ್ಲಾ ಮಾನ್ಯ ಜಿಲ್ಲಾಧಿಕಾರಿಗಳು. ಜಿಲ್ಲೆಯ ತಾಲ್ಲೂಕು ತಾಹಶೀಲ್ದಾರರು, ಸರ್ಕಾರಿ ಭೂಮಿಯ ಒತ್ತುವರಿ ತೆರವುಗೊಳಿಸುವಲ್ಲಿ ಕ್ರಮ ಜರುಗಿಸಲು ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅನಧಿಕೃತ ಒತ್ತುವರಿದಾರರಿಗೆ ಇಲಾಖೆಯಿಂದಲೇ ಪ್ರೋತ್ಸಾಹಿಸಿ ಶಾಮೀಲಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ. ಸರ್ಕಾರಿ ಭೂಮಿಯನ್ನು ಒತ್ತುವರಿ ತೆರವುಗೊಳಿಸಲು | ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿದ್ದಲ್ಲಿ ಅಂತಹವರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 192 ರನ್ವಯ ಕ್ರಮವಹಿಸಲಾಗುತ್ತಿದೆ.<br><br>ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಒಟ್ಟು 3323-13 ಎಕರೆ/ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ. |

| | | |
|---|---|---|
| | ಕೈಗೊಂಡ ಕ್ರಮವೇನು: (ಸಂಪೂರ್ಣ ವಿವರ ನೀಡುವುದು) | |
| (ಈ) | ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ. ಪಡುವನಹಳ್ಳಿ ಗ್ರಾಮದ ಸರ್ವೆ ನಂಬರ್ 67 ರಲ್ಲಿ 6 ಎಕರೆ 09 ಗುಂಟೆ ಕೆರೆ ಭೂಮಿ ಹಾಗೂ ಸರ್ವೆ ನಂಬರ್ 69ರಲ್ಲಿ ಹುಳಿಕಟ್ಟೆ 26 ಎಕರೆ ಜಮೀನು ಒತ್ತುವರಿ ತೆರವುಗೊಳಿಸಲು ಕೈಗೊಂಡಿರುವ ಕ್ರಮವೇನು: ಈ ಬಗ್ಗೆ ಗ್ರಾಮಸ್ಥರಿಂದ ಮನವಿ ಸ್ವೀಕರಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು) | ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ ಪಡುವನಹಳ್ಳಿ ಗ್ರಾಮದ ಸ.ನಂ 67 ರಲ್ಲಿ 06-09 ಎಕರೆ/ಗುಂಟೆ ಜಮೀನು ಹಾಗೂ ಸರ್ವೆ ನಂಬರ್ 69 ರಲ್ಲಿ ಹುಳಿಕಟ್ಟೆ 26-00 ಎಕರೆ ಜಮೀನು ಒತ್ತುವರಿ ತೆರವುಗೊಳಿಸಲು ಗ್ರಾಮಸ್ಥರಿಂದ ಅರ್ಜಿ ಸ್ವೀಕೃತವಾಗಿರುತ್ತದೆ.<br><br>ಪಡುವನಹಳ್ಳಿ ಗ್ರಾಮದ ಸ.ನಂ 67 ರಲ್ಲಿ 06-09 ಎಕರೆ/ಗುಂಟೆ ಕೆರೆ ಜಮೀನಿಗೆ ಸಂಬಂಧಿಸಿದಂತೆ ಒತ್ತುವರಿ ತೆರವುಗೊಳಿಸಲು ತಹಶೀಲ್ದಾರ್, ಚನ್ನರಾಯಪಟ್ಟಣ ರವರು ತೆರಳಿದ ಸಂದರ್ಭದಲ್ಲಿ ಗ್ರಾಮಸ್ಥರು ತಕರಾರು ಮಾಡಿ ಪುನಃ ಅಳತೆ ಕಾರ್ಯ ಮಾಡಲು ಕೋರಿರುತ್ತಾರೆ. ಅಳತೆಗೆ ದಿನಾಂಕ ನಿಗದಿಪಡಿಸಿ ನಿಯಮಾನುಸಾರ ತೆರವುಗೊಳಿಸಲು ಕ್ರಮವಹಿಸಲಾಗುವುದು.<br><br>ಪಡುವನಹಳ್ಳಿ ಗ್ರಾಮದ ಸ.ನಂ 69 ರಲ್ಲಿ 21-00 ಎಕರೆ ಪ್ರದೇಶವು ಈಗಾಗಲೇ ವಿಶೇಷ ಭೂಸ್ವಾಧೀನಾಧಿಕಾರಿ, ಹಾಸನ ರವರು ದಿನಾಂಕ 03-12-1976 ರಂದು ಮಂಜೂರು ಮಾಡಿದ್ದು, ಮಂಜೂರಾತಿಯಂತೆ ಖಾತೆಯಾಗಿದ್ದು, ಹಾಲಿ ಪಹಣಿಯಲ್ಲಿ ಖಾತೆ ನಮೂದಾಗಿರುತ್ತದೆ.<br><br>ಮುಂದುವರೆದು, ಪಹಣಿ ದಾಖಲೆಯಂತೆ 26-00 ಎಕರೆ ಇದ್ದು, ಆಕಾರ್‌ಬಂದ್‌ನಂತೆ 23-00 ಎಕರೆ ಇರುತ್ತದೆ. ಆಕಾರ್‌ಬಂದ್ ಹಾಗೂ ಪಹಣಿ ದಾಖಲೆ ವ್ಯತ್ಯಾಸವಿದ್ದು, ವ್ಯತ್ಯಾಸ ಸರಿಪಡಿಸುವ ಸಂಬಂಧ ದುರಸ್ತಿಗೆ ಈಗಾಗಲೇ ಆನ್‌ಲೈನ್ ತಂತ್ರಾಂಶದಲ್ಲಿ ಕ್ರಮವಹಿಸಲಾಗಿರುತ್ತದೆ. ದುರಸ್ತಿ ನಂತರ ಪಹಣಿ ಮತ್ತು ಆಕಾರ್‌ಬಂದ್ ತಾಳೆ ಮಾಡಿ ಮಂಜೂರಾತಿಯಾಗಿರುವ ವಿಸ್ತೀರ್ಣವನ್ನು ಹೊರತುಪಡಿಸಿ ಉಳಿಕೆ ಹುಲಿಕಟ್ಟೆ ಸರ್ಕಾರಿ ವಿಸ್ತೀರ್ಣದ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. |

(ಕಡತ ಸಂಖ್ಯೆ:ಆರ್‌ಡಿ 20 ಎಲ್‌ಜಿಹೆಚ್ 2025)

**(ಕೃಷ್ಣಬೈರೇಗೌಡ)**
ಕಂದಾಯ ಸಚಿವರು

## ಅನುಬಂಧ-1

| Sl. No | Taluk | Total Extent of govt. land | Total extent of Govt. Land under encroachment | Encroachment involved under | | Total (5a+5b) | Clear Balance to be removed (4-6) | Total Extent removed |
|---|---|---|---|---|---|---|---|---|
| | | | | Form- 50/53, 94c etc | Court cases | | | |
| 1 | 2 | 3 | 4 | 5 | 6 | 7 | 8 | 9 |
| 1 | Alur | 13475-36 | 8481-20 | 4114-14 | 24-29 | 4139-03 | 4342-17 | 222.17 |
| 2 | Arakalagudu | 5988-08 | 5880-37 | 5582-15 | 0 | 5582-15 | 298-22 | 220-32 |
| 3 | Arasikere | 27890-11 | 10845-29 | 4279-18 | 10-00 | 4289-18 | 6556-11 | 597-24 |
| 4 | Beluru | 20543-34 | 11847-37 | 7534-36 | 1-10 | 7536-06 | 4311-31 | 395-20 |
| 5 | Channarayapattana | 17302-15 | 4692-22 | 3311-06 | 3-20 | 3314-26 | 1377-36 | 500-39 |
| 6 | Hassan | 16654-17 | 13846-14 | 7340-05 | 0-13 | 7340-18 | 6505-36 | 449-14 |
| 7 | Holenarasipura | 10396-01 | 10396-01 | 3923-28 | 0 | 3923-28 | 6472-13 | 299-06 |
| 8 | Sakleshapura | 29758-00 | 8746-07 | 7043-21 | 1-35 | 7045-16 | 1700-31 | 637-21 |
| | **Total** | **142009-02** | **74737-07** | **43129-23** | **41-27** | **43171-10** | **31565-37** | **3323-13** |

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ.